# ವಾರ್ತಾ ವಿಶ್ಲೇಷಣೆ

## ಟಿ.ವಿ. ವೀಕ್ಷಕರಿಗೆ ಕಿವಿಮಾತು

ಟಿ.ವಿ. ನೋಡುವ ಮಕ್ಕಳು ಬೇಗನೆ ಪ್ರಾಯಕ್ಕೆ ಬರುವರೆ? ಅಮೆರಿಕದಲ್ಲಿ ನಡೆದ ಕೆಲವು ಅಧ್ಯಯನಗಳು ಈ ಪ್ರಶ್ನೆಗೆ ಸಕಾರಾತ್ಮಕ ಉತ್ತರವನ್ನು ನೀಡುತ್ತವೆ. ಟಿ.ವಿ.ಯಲ್ಲಿ ಬರುವ ಲೈಂಗಿಕ ವಿಷಯಗಳನ್ನು ನಿರಂತರವಾಗಿ ಬಹಳ ಕಾಲ ವೀಕ್ಷಿಸುವುದರಿಂದ ಮಕ್ಕಳು ಬಹಳ ಬೇಗ ಪ್ರಾಯಕ್ಕೆ ಬರುವ ಸಾಧ್ಯತೆಯಿದೆ ಎಂಬುದು ಸಾಮಾನ್ಯ ಅಭಿಪ್ರಾಯವಾದರೂ, ಅಧ್ಯಯನದ ಪ್ರಕಾರ ಟಿ.ವಿ.ಯಲ್ಲಿ ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ವೀಕ್ಷಿಸಿದರೂ ಮಕ್ಕಳು ಬೇಗನೆ ಪ್ರಾಯಕ್ಕೆ ಬರುವ ಸಾಧ್ಯತೆ ಇದೆ. ಟಿ.ವಿ., ಕಂಪ್ಯೂಟರ್ ಮತ್ತು ವೀಡಿಯೊಗಳನ್ನು ನೋಡದ ಮಕ್ಕಳಲ್ಲಿ ಮೆಲಾಟೊನಿನ್ (melatonin) ಎಂಬ ಹಾರ್ಮೋನ್ ಹೆಚ್ಚು ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದಂತೆ, ಮತ್ತು, ಅದು ಮಕ್ಕಳು ಬೇಗನೆ ಪ್ರಾಯಕ್ಕೆ ಬರುವುದನ್ನು ತಡೆಯುತ್ತದೆ. ಹೆಚ್ಚಾಗಿ ಟಿ.ವಿ., ಕಂಪ್ಯೂಟರ್ ಮತ್ತು ವೀಡಿಯೋ ನೋಡುವುದರಿಂದ ಈ ಹಾರ್ಮೋನಿನ ಉತ್ಪತ್ತಿ ಕಡಮೆಯಾಗಿ ಮಕ್ಕಳು ಬೇಗನೆ ಪ್ರಾಯಕ್ಕೆ ಬರುವ ಸಾಧ್ಯತೆಯಿದೆ. ಟಿ.ವಿ. ಮುಂತಾದವುಗಳ ವೀಕ್ಷಣೆ ಮೆಲಾಟೋನಿನ್ ಉತ್ಪತ್ತಿಯನ್ನು ಯಾವ ರೀತಿ ತಡೆಯುತ್ತದೆ ಮತ್ತು ಇವುಗಳ ನಡುವೆ ಇರುವ ಸಂಬಂಧವೇನು ಎಂಬುದು ಇನ್ನೂ ವೈಜ್ಞಾನಿಕವಾಗಿ ಪ್ರತಿಪಾದಿತವಾಗಿಲ್ಲ.

ಅಂತೂ ಆಧುನಿಕ ಟಿ.ವಿ. ಸಂಸ್ಕೃತಿಯ ಪ್ರಭಾವದಿಂದ ಮಕ್ಕಳಿಗೆ ಬಾಲ್ಯಾವಸ್ಥೆಯ ಆನಂದವನ್ನು ಹೆಚ್ಚು ಕಾಲ ಅನುಭವಿಸುವ ಸೌಭಾಗ್ಯ ಇಲ್ಲದಂತಾಗಿದೆ. ಭೌತಿಕವಾಗಿ ಪ್ರಾಯಕ್ಕೆ ಬರುವುದಕ್ಕಿಂತ ಮುಖ್ಯವಾಗಿ ಮಕ್ಕಳಲ್ಲಿ ನೈತಿಕ ಮತ್ತು ಆಧ್ಯಾತ್ಮಿಕ ಪ್ರೌಢಿಮೆ ಉಂಟಾಗುವಂತೆ ನೋಡಿಕೊಳ್ಳಬೇಕು. ಇಂತಹ ಪ್ರೌಢಿಮೆಯನ್ನು ಅನೇಕ ಮಹಾತ್ಮರ ಬಾಲ್ಯಾವಸ್ಥೆಯಲ್ಲಿ ಕಾಣುತ್ತೇವೆ. ಆದರೆ, ಇದರ ಬದಲು ಮಕ್ಕಳು ಬೇಗನೆ ಪ್ರಾಯಕ್ಕೆ ಬರುವುದರಿಂದ ಅವರು ಬಾಲ್ಯಾವಸ್ಥೆಯ ಆನಂದವನ್ನು ಕಳೆದುಕೊಳ್ಳುವುದಲ್ಲದೆ, ಅನೇಕ ಮಾನಸಿಕ ಸಂಘರ್ಷ, ಗೊಂದಲ, ಚಾರಿತ್ರ್ಯಹೀನತೆ ಮುಂತಾದವುಗಳಿಗೆ ಬಲಿಯಾಗಬೇಕಾಗುತ್ತದೆ. ಇದರಿಂದ ಸಮಾಜದಲ್ಲಿ ಬಾಲಾಪರಾಧಗಳು ಅಧಿಕವಾಗುತ್ತವೆ.

ಮಕ್ಕಳಲ್ಲಿ ಪುಸ್ತಕಾಭಿರುಚಿಯನ್ನು ಬೆಳೆಸಬೇಕು, ಅವರು ವೀಡಿಯೊ ಗೇಮ್ ಬದಲು ಕಲೆತು ಆಟವಾಡುವುದನ್ನು ಕಲಿಯಬೇಕು, ಅವರು ಟಿ.ವಿ. ಮುಂತಾದವುಗಳೊಡನೆಯೇ ಸದಾ ವ್ಯವಹರಿಸುವ ಬದಲು ಮಾನವರೊಡನೆ ವ್ಯವಹರಿಸುವುದನ್ನು ಕಲಿಯಬೇಕು, ಮತ್ತೆ ಪರದೆಯೊಳಗಿನ ಮಾನವರಿಗಿಂತ ಸುತ್ತಮುತ್ತಲಿನ ಮಾನವರು ಅವರಿಗೆ ಹೆಚ್ಚು ನಿಜವಾಗಬೇಕು.

## ಸೋಮಾರಿಗಳಿಗೆ ಸದವಕಾಶ

ನಾವು ಎಷ್ಟೋ ಕೆಲಸಗಳನ್ನು ಯಂತ್ರಗಳಿಗೆ ವಹಿಸಿ ಕೆಲಸಗಳಿಂದ ಸ್ವತಂತ್ರರಾಗುತ್ತಿದ್ದೇವೆ. ಯಂತ್ರ ನಮಗೆ ಬೇಕಾದ ಕೆಲಸವನ್ನೆಲ್ಲ ಮಾಡುತ್ತದೆ. ಈ ರೀತಿ ನಾವು ಕೆಲಸದಿಂದ ಸ್ವತಂತ್ರರಾದರೂ ಯಂತ್ರಗಳಿಗೆ ದಾಸರಾಗುತ್ತಿದ್ದೇವೆ. ಅವೇ ನಮ್ಮನ್ನು ನಿಯಂತ್ರಿಸುತ್ತವೆ. ಯಂತ್ರಗಳನ್ನು ನಿಯಂತ್ರಿಸಲು ದೂರನಿಯಂತ್ರಣಗಳನ್ನು (remote control) ಉಪಯೋಗಿಸುತ್ತೇವೆ. ಇದರಲ್ಲಿ ಕೈಬೆರಳಿಗಾದರೂ ಸ್ವಲ್ಪ ಕೆಲಸವಿರುತ್ತದೆ. ಇನ್ನು ಮುಂದೆ ನೀವು ಕೈಬೆರಳನ್ನೂ ಉಪಯೋಗಿಸಬೇಕಾಗಿಲ್ಲ. ಸುಮ್ಮನೆ ಕುಳಿತು ಆಲೋಚಿಸಿದರೆ ಸಾಕು. ನಿಮ್ಮ ಮನಸ್ಸೇ ಯಂತ್ರವನ್ನು ಚಲಿಸಬಲ್ಲದು. ನೀವು ಆಲೋಚಿಸಿದಂತೆ ಕೆಲಸ ಮಾಡುವ ರೋಬೋ (robot)ಗಳು ಬರಲಿವೆಯಂತೆ! ನೀವು ಬಾಯಿ ಬಿಡಬೇಕಾದ ಆವಶ್ಯಕತೆಯೂ ಇಲ್ಲ! ನಿಮ್ಮ ಮೆದುಳಿನ ಭಾಗದಲ್ಲಿ (Parietal cortex) ಒಂದು ಚಿಪ್ ಅನ್ನು ಅಳವಡಿಸಿದಾಗ ಅದು ನಿಮ್ಮ ಆಲೋಚನೆಯ ಸಿಗ್ನಲ್‌ಗಳನ್ನು ಸ್ವೀಕರಿಸಿ ರೇಡಿಯೇಷನ್ ಮೂಲಕ ಯಂತ್ರಗಳಿಗೆ ಸೂಕ್ತ ಚಾಲನೆಯನ್ನು ಕೊಡುತ್ತವೆಯಂತೆ!

ಇದೇ ವಿಧಾನದ ಮೂಲಕ ಬೇರೆ ಬಾಹ್ಯ ಕ್ರಿಯೆಗಳೂ ಸಾಧ್ಯವಾಗಬಹುದು. ಆದರೆ ನಿಮ್ಮ ಆಲೋಚನೆಗಳ ಮೇಲೆ ನಿಯಂತ್ರಣವಿಲ್ಲದಿದ್ದರೆ ಶ್ರೀರಾಮಕೃಷ್ಣರು ಹೇಳಿದ ಕಲ್ಪತರು ಕಥೆಯಂತಾಗಬಹುದು. ಒಬ್ಬ ವ್ಯಕ್ತಿ ಒಂದು ಮರದ ಕೆಳಗೆ ವಿಶ್ರಮಿಸಿಕೊಳ್ಳುತ್ತಿದ್ದ. ಅದು ಕಲ್ಪತರುವೆಂದು ಆತನಿಗೆ ತಿಳಿಯದು. ಮಲಗಲು ಒಂದು ಮಂಚವಿದ್ದರೆ ಎಷ್ಟು ಚೆನ್ನಾಗಿರುತ್ತದೆ ಎಂಬ ಆಲೋಚನೆ ಅವನಿಗೆ ಬಂತು. ಕೂಡಲೆ ಮಂಚ ಪ್ರತ್ಯಕ್ಷ! ಅನಂತರ ಹಾಸಿಗೆ, ಮನೆ ಮುಂತಾದವುಗಳನ್ನು ಆಲೋಚಿಸಿದ. ಅವೆಲ್ಲವೂ ಕೂಡಲೆ ಕಾಣಿಸಿಕೊಂಡವು. ಈ ನಿರ್ಜನ ಪ್ರದೇಶದಲ್ಲಿ ಹುಲಿ ಬಂದರೆ ಏನು ಗತಿ ಎಂದು ಆತ ಆಲೋಚಿಸುತ್ತಿದ್ದಂತೆಯೇ ಒಂದು ಹುಲಿ ಎಲ್ಲಿಂದಲೋ ಬಂದು ಅವನನ್ನು ಕಬಳಿಸಿತು. ಈ ಗೊಂದಲವನ್ನು ನಿವಾರಿಸಬಹುದಾದ ಅತ್ಯಂತ ಸೂಕ್ಷ್ಮವಾದ ಮತ್ತು ಯೋಗ್ಯವಾದ ಚಿಪ್‌ಗಳನ್ನು ಮುಂದೆ ತಯಾರಿಸಬಹುದಾದ ಸಾಧ್ಯತೆ ಇದೆಯಂತೆ. ಹಾಗಾದರೆ ಸೋಮಾರಿಗಳು ಕೊಂಚವೂ ಅಲುಗಾಡದೆ ಎಲ್ಲವನ್ನೂ ಪಡೆಯಬಹುದು.

ಬ್ರಹ್ಮನೂ ಕೂಡ ಅಲ್ಲಾಡದೆಯೇ, ಸುಮ್ಮನೆ ಕುಳಿತು ಆಲೋಚಿಸಿಯೇ ಇಡೀ ಜಗತ್ತನ್ನು ಸೃಷ್ಟಿಸಲಿಲ್ಲವೇ? ಮನುಷ್ಯರಿಂದಲೂ 'ವಿಶ್ವಾಮಿತ್ರ ಸೃಷ್ಟಿ' ಆಗಬಾರದೇಕೆ? ಹೀಗೆ ಎಲ್ಲರೂ ಪವಾಡಪುರುಷರಾದರೆ, ಆರ್ಥಿಕ ಸಮಸ್ಯೆಯೇ ಇರುವುದಿಲ್ಲ. ಆದರೆ ಈ ಪ್ರಪಂಚದಲ್ಲಿ ಹೊಸ ಸಮಸ್ಯೆಯನ್ನು ಹುಟ್ಟುಹಾಕದ ಯಾವ ಹೊಸ ಆವಿಷ್ಕಾರವೂ ಇಲ್ಲ. ಆದ್ದರಿಂದ, ಸೃಷ್ಟಿಯನ್ನು ಮೀರಿ ಹೋಗುವುದೇ ಮನುಷ್ಯನ ಗುರಿಯಾಗಬೇಕು.